ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಬೆಂಗಳೂರು ನಗರದ ಜಯಪ್ರಕಾಶ್ ನಾರಾಯಣ್ 8ನೇ ಹಂತದ ಬಡಾವಣೆ ಕುರಿತು

ಶ್ರೀ ಪಿ. ಆರ್. ರಮೇಶ್(ನಾಮನಿರ್ದೇಶನ ಹೊಂದಿದವರು) -

535 (550) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ/ಸರ್ಕಾರದಿಂದ ಬೆಂಗಳೂರು ನಗರದ ಜಯಪ್ರಕಾಶ್ ನಾರಾಯಣ್ 8ನೇ ಹಂತದ ಬಡಾವಣೆಯ ನಿರ್ಮಾಣ ಯಾವ ಹಂತದಲ್ಲಿದೆ; (ಈ ಕುರಿತು ಯಾವುದೇ ನ್ಯಾಯಾಲಯದ ಆದೇಶಗಳು ಇದ್ದಲ್ಲಿ, ಅದರ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿ ನೀಡುವುದು)

(ಆ) ಕೊತ್ತನೂರು ಗ್ರಾಮದ ಸರ್ವೇ ನಂ.87 ಒಟ್ಟು 57 ಎಕರೆ 11 ಗುಂಟೆ ಜಮೀನನ್ನು ಸರ್ಕಾರದ ರಿಸರ್ವ್ ಕಾವಲ್ ಎಂದು ಇರುವುದರ ಬಗ್ಗೆ ಪ್ರಾಧಿಕಾರದಿಂದ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ; (ಈ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ನೀಡುವುದು)

(ಇ) OS No: 8957/1996 ಸಿವಿಲ್ ನ್ಯಾಯಾಲಯದಲ್ಲಿ ಸರ್ವೇ ನಂ.87ಕ್ಕೆ ಸಂಬಂಧಿಸಿದ ಆದೇಶ ಪ್ರಕಾರ ಪ್ರಾಧಿಕಾರ ಯಾವ ಕ್ರಮಗಳನ್ನು ಜರುಗಿಸಿದೆ; (ಈ ಸಂಬಂಧ ಕೈಗೊಂಡ ಕ್ರಮಗಳ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ನೀಡುವುದು)

(ಈ) ಬೆಂಗಳೂರು ದಕ್ಷಿಣ ತಾಲ್ಲೂಕು ಹಿಂದುಳಿದ ವರ್ಗ, ಹಿಂದುಳಿದ ಜಾತಿ ಮತ್ತು ಹಿಂದುಳಿದ ಪಂಗಡಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಕೊತ್ತನೂರು ಗ್ರಾಮದ ಸರ್ವೇ ನಂ.87/5ರ ಪರವಾಗಿ 1989ನೇ ಇಸವಿಯಲ್ಲಿ ನೀಡಿದ ಆಕ್ಷೇಪಣೆಗಳ ಪ್ರಕಾರ ಪ್ರಾಧಿಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? (ಮಾಹಿತಿಯನ್ನು ಒದಗಿಸುವುದು)